# ಆಹಾ ಸುದ್ದಿ!

★ ಸಸಿತೋಟ

ಬೋಟ್ಸ್‌ವಾನಾದ ವಸತಿಗೃಹವೊಂದರ ಶೌಚಾಲಯದಿಂದ ಈ ಆನೆ ಆರಾಮವಾಗಿ ನೀರನ್ನು ಬಾಟಲ್‌ನಿಂದ ತಂಪು ಪಾನೀಯ ಎಳೆದಂತೆ ಎಳೆಯುತ್ತಿದೆ. ಬಾಯಾರಿದ ಆನೆಗಳು ಈ ರೀತಿ ಶೌಚಾಲಯ, ಸ್ನಾನಗೃಹದಿಂದ ಕದ್ದು ನೀರು ಕುಡಿಯುವುದು ಅಲ್ಲಿ ಮಾಮೂಲಂತೆ. ಅಲ್ಲಿಯ ಜನರಿಗೂ ಅನುಕೂಲ, 'ವಾಸನಾಭರಿತ' ಆನೆಯ ಸುಳಿವನ್ನು ದೂರದಿಂದಲೇ ಪತ್ತೆ ಮಾಡಬಹುದು.



ಬೇಸಿಗೆಯಲ್ಲಿ ತೀರಾ ಬಿಸಿಲಿದ್ದರೆ 'ಮೊಟ್ಟೆಯನ್ನು ಹುರಿಯುವಷ್ಟು ಬಿಸಿಲು' ಎಂಬ ಮಾತಿದೆ. ಇದನ್ನೇ ನಿಜ ಮಾಡಿದ್ದು ಜಿಬ್ರಾಲ್ಟರ್‌ನ ನವೋಮಿ ಎಂಬ ಪ್ರಸಾಧನ ತಜ್ಞೆ. ಉಷ್ಣಾಂಶ 40 ಡಿ.ಸೆ. ತಲುಪಿದಾಗ ತವಾವನ್ನು ಕಿಟಕಿ ಮೇಲಿಟ್ಟು ಬಿಸಿ ಮಾಡಿದಳಂತೆ. ಅದರ ಮೇಲೆ ಮೊಟ್ಟೆಯನ್ನು ಒಡೆದು ಹಾಕಿದಾಗ ಅದು ಬೆಂದು ಆಮ್ಲೆಟ್ ತಯಾರಾಯ್ತು. ಸೌರಶಕ್ತಿ ಪ್ರಚಾರಕ್ಕೆ ಒಳ್ಳೆಯ ಸ್ಲೋಗನ್.

ಚೀನಾದಲ್ಲಿ ಯುವತಿಯೊಬ್ಬಳು ಕಾಲಿನ ಮೇಲೆ ಇಬ್ಬರು ಯುವಕರನ್ನು ಬ್ಯಾಲನ್ಸ್ ಮಾಡಿ ಅಕ್ರೊಬ್ಯಾಟ್ ಕುಶಲೆ ಎನಿಸಿಕೊಂಡಿದ್ದಾಳಂತೆ. ಕಣ್ಣ ನೋಟದಲ್ಲಿ ಮಾತ್ರವಲ್ಲ, ಕಾಲಿನ ತುದಿಯಲ್ಲೇ ಪುರುಷರನ್ನು ಕುಣಿಸಬಲ್ಲೆ ಎಂಬುದರ ಸಂಕೇತವಿರಬಹುದು.



ನೆದರ್ಲೆಂಡ್‌ನ ಡಾಮಿನಿಕ್ ಎಂಬಾಕೆ 41ನೇ ವಯಸ್ಸಿನಲ್ಲಿ ವಿಧವೆಯಾದಳು. 16 ವರ್ಷಗಳ ಜೊತೆಗಾರನನ್ನು ಕಳೆದುಕೊಂಡಾಕೆ ಈಗ ಮತ್ತೆ ಪ್ರೇಮದಲ್ಲಿ ಸಿಲುಕಿ ಮದುವೆಯಾಗುತ್ತಿದ್ದಾಳೆ. ಅದೇನು ಹೆಚ್ಚುಗಾರಿಕೆ ಎಂದಿರಾ? ಆಕೆಯ ಮೊದಲ ಗಂಡ ಒಂದು ಬೆಕ್ಕಾಗಿತ್ತು. ಹೊಸ ಪ್ರೇಮಿ ಒಂದು ನಾಯಿಯಂತೆ. ಗಂಡನಾಗುವವನೇ ಬೊಗಳುತ್ತಿರುವಾಗ, ಸಮಾಜ ಬೊಗಳಿದರೇನು ಬಿಡಿ ಎಂದು ಡಾಮಿನಿಕ್ ಮುಗುಮ್ಮಾಗಿ ಮದುವೆ ತಯಾರಿ ನಡೆಸಿದ್ದಾಳಂತೆ.



ಸೌಥ್‌ವೇಲ್ಸ್‌ನಲ್ಲಿ ಕಸದ ತೊಟ್ಟಿಯೊಳಗೆ ಭೂಪನೊಬ್ಬ ಇಡೀ ಗಾಲಿಮನೆಯನ್ನೇ ಎಸೆದು ಹೋಗಿದ್ದ. ಕಸ ತೆರವು ಮಾಡಲು ಹೋದ ಸಿಬ್ಬಂದಿ ಇಡೀ ಮನೆಯೇ ಕಸದ ತೊಟ್ಟಿಯೊಳಗೆ ಹೇಗೆ ಬಂತು ಎಂದು ಈಗ ತಲೆ ಕೆಡಿಸಿಕೊಳ್ಳುತ್ತಿದ್ದಾರಂತೆ. ಮನೆಯೊಳಗಿನ ಕಸವನ್ನು ತೊಟ್ಟಿಗೆ ಸುರಿಯಲು ಬೇಸರವಾದರೆ ಇಡೀ ಮನೆಯನ್ನೇ ತೊಟ್ಟಿಗೆ ಎಸೆಯುವ ಐಡಿಯಾವನ್ನು ಆ ಮಹಾಶಯ ಹೇಳಿಕೊಟ್ಟಿದ್ದಾನೆ.



ಕೋಸ್ಟಾರಿಕಾದ ಅಜ್ಜಿ ಆಂಡ್ರಿಯಾ ರೋಜಸ್ 4500ಕ್ಕೂ ಅಧಿಕ ಬೊಂಬೆಗಳನ್ನು ತನ್ನ ಮನೆಯಲ್ಲಿ ಸಂಗ್ರಹಿಸಿದ್ದಾಳಂತೆ. ಕಳೆದ 20 ವರ್ಷಗಳಿಂದ ಈ ಹವ್ಯಾಸ ಬೆಳೆಸಿಕೊಂಡು ಬರುತ್ತಿರುವ 70ರ ಅಜ್ಜಿ ಮನೆಯಲ್ಲಿ ಎಲ್ಲೆಂದರಲ್ಲಿ ಬೊಂಬೆಗಳನ್ನು ಇಟ್ಟುಕೊಂಡಿದ್ದು, ಮನೆಗೆ ಬಂದವರನ್ನು ಹೊರಗೇ ನಿಲ್ಲಿಸಿ ಮಾತನಾಡಿಸುತ್ತಾಳಂತೆ. ಎಲ್ಲವೂ ಬೊಂಬೆಯಾಟವಯ್ಯ.